# ಚಿನ್ಮಯ ಮಿಷನ್

ದೀನಬಂಧು ದೇವಸ್ಥಾನ, ಸಿ.ಎಂ.ಹೆಚ್. ರಸ್ತೆ, ಇಂದಿರಾನಗರ, ಬೆಂಗಳೂರು – 560 038

# "ಋಷಿಪುತ್ರ ಯೋಜನೆ"

ಆತ್ಮೀಯರೇ,

ಪೂಜ್ಯ ಸ್ವಾಮೀ ಚಿನ್ಮಯಾನಂದರು ವಿಶ್ವಾದ್ಯಂತ ಅಭಿನವ ಗೀತಾಚಾರ್ಯರೆಂದೇ ಪ್ರಸಿದ್ಧರಾಗಿದ್ದರು. ಭಗವದ್ಗೀತೆ ಇಂದು ವಿಶ್ವದ ಮೂಲೆಮೂಲೆಯಲ್ಲಿ ಪ್ರತಿಧ್ವನಿಸಲು ಸ್ವಾಮೀಜೀಯವರ ನಿರಂತರ ಗೀತಾಜ್ಞಾನಯಜ್ಞಗಳೇ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು. ಪೂಜ್ಯ ಗುರುದೇವರನ್ನು "ಗೀತಾಜ್ಞಾನಪ್ರಚಾರಕಾಯ" ಹಾಗೂ "ಜ್ಞಾನತೃಪ್ತಾಯ" ಎಂದು ಅವರ ಅಷ್ಟೋತ್ತರ ಶತನಾಮಾವಳಿಯಲ್ಲಿ ಕರೆಯಲಾಗಿದೆ. ತಮ್ಮ ಪೂರ್ಣ ಜೀವನವನ್ನು ನಮ್ಮ ಶಾಸ್ತ್ರಗ್ರಂಥಗಳಾದ ಉಪನಿಷತ್ತುಗಳು, ಗೀತೆ ಹಾಗೂ ಇನ್ನೂ ಹಲವಾರು ಗ್ರಂಥಗಳ ಪ್ರಚಾರದಲ್ಲಿ ತೊಡಗಿ ಆ ಕಾರ್ಯದಿಂದಲೇ ತೃಪ್ತಿಯನ್ನು ಪಡೆದುಕೊಂಡರು. ಇಂದಿಗೆ ಭಗವದ್ಗೀತೆಯನ್ನು ಕುರಿತು ಯಾರಾದರೂ ಪ್ರವಚನವನ್ನು ನೀಡುತ್ತಿದ್ದಾರೆಂದರೆ ಅವರು ಒಂದಲ್ಲ ಒಂದು ರೀತಿಯಲ್ಲಿ ಪೂಜ್ಯ ಸ್ವಾಮೀ ಚಿನ್ಮಯಾನಂದರಿಂದ ಉತ್ತೇಜಿಸಲ್ಪಟ್ಟವರಾಗಿರುತ್ತಾರೆ.

ತಾವು ಒಬ್ಬರೇ ಈ ಕಾರ್ಯವನ್ನು ನಿರ್ವಹಿಸಲು ಸಾಮರ್ಥ್ಯವನ್ನು ಹೊಂದಿದ್ದರೂ, ತಮ್ಮಂತಹ ಸಾವಿರಾರು ಆಚಾರ್ಯರುಗಳನ್ನು ಪ್ರಪಂಚಕ್ಕೆ ನೀಡುವ ಉದ್ದೇಶದಿಂದ ಪ್ರಾರಂಭದಲ್ಲಿ ಮುಂಬೈನ ಸಾಂದೀಪನಿ ಸಾಧನಾಲಯದಲ್ಲಿ 1965ರಲ್ಲಿ ಮೊದಲ ವೇದಾಂತ ತರಬೇತಿಯನ್ನು ಆಂಗ್ಲಭಾಷೆಯಲ್ಲಿ ಪ್ರಾರಂಭಿಸಿದರು. ಇಂದಿಗೆ ಸಾವಿರಾರು ಸಾಧಕರು ಉಪನಿಷತ್ತುಗಳು, ಭಗವದ್ಗೀತೆ, ಹಲವಾರು ವೇದಾಂತ ಗ್ರಂಥಗಳು ಹಾಗೂ ರಾಮಾಯಣ, ಮಹಾಭಾರತ, ಪುರಾಣಗಳ ಅಧ್ಯಯನವನ್ನು ಮಾಡಿರುತ್ತಾರೆ ಮಾತ್ರವಲ್ಲದೆ, ಪ್ರವಚನಗಳನ್ನು ಮಾಡುತ್ತಿದ್ದಾರೆ.

ಕಾಲಾಂತರದಲ್ಲಿ ಈ ಜ್ಞಾನವನ್ನು ಭಾರತದ ಪ್ರಾಂತೀಯ ಭಾಷೆಗಳಲ್ಲಿ ನೀಡಲು ಸ್ವಾಮೀಜೀಯವರು ಪ್ರೋತ್ಸಾಹಿಸಿದರು. ಹಿಂದಿ, ತಮಿಳು, ತೆಲುಗು, ಮಲಯಾಳಂ, ಮರಾಠಿ ಹಾಗೂ ಕನ್ನಡದಲ್ಲಿ ನಾನಾ ಆಚಾರ್ಯರುಗಳು ಸಾಧಕರಿಗೆ ತರಬೇತಿ ನೀಡಿದ್ದಾರೆ. ಈಗ ಸ್ವಾಮೀ ಚಿನ್ಮಯಾನಂದರ, ಸ್ವಾಮೀ ತೇಜೋಮಯಾನಂದರ ಹಾಗೂ ಸ್ವಾಮೀ ಸ್ವರೂಪಾನಂದರ ಪೂರ್ಣಕೃಪಾಶೀರ್ವಾದಗಳೊಂದಿಗೆ ಚಿನ್ಮಯ ಸಾಂದೀಪನಿಯು 2022ರ ಅಕ್ಟೋಬರ್ 13ರಂದು ಕನ್ನಡದಲ್ಲಿ ವೇದಾಂತ ತರಬೇತಿಯನ್ನು ಪ್ರಾರಂಭಿಸಲಾಗುತ್ತಿದೆ.

. . . . 2

ಎರಡು ವರ್ಷಗಳ ಈ ತರಬೇತಿಯು ಸಂಪೂರ್ಣವಾಗಿ ಉಚಿತವಾಗಿದ್ದು, ಸಾಧಕರನ್ನು ನಿರ್ಮಿಸುವಲ್ಲಿ ತೊಡಗುತ್ತದೆ. ಗುರುದೇವರು ಈ ತರಬೇತಿಯಲ್ಲಿ ಸಾಧಕರಿಗೆ ಅನ್ನದಾನ, ವಸ್ತ್ರದಾನ ಹಾಗೂ ಪುಸ್ತಕದಾನವನ್ನು ನೀಡುವ ಸದುದ್ದೇಶದಿಂದ **'ಋಷಿಪುತ್ರ ಯೋಜನೆ'**ಯನ್ನು ಸ್ಥಾಪಿಸಿರುವರು. ಎರಡು ವರ್ಷಗಳ ಈ ತರಬೇತಿಯಲ್ಲಿ ಒಬ್ಬ ಬ್ರಹ್ಮಚಾರಿಗಿ ಸುಮಾರು ಮೂರು ಲಕ್ಷ ಖರ್ಚಾಗುತ್ತದೆ. ದಾನಿಗಳು ಈ ಕಾರ್ಯದಲ್ಲಿ ಕೈಜೋಡಿಸಬಹುದು. ಬ್ರಹ್ಮಚಾರಿಯ ಎರಡು ವರ್ಷದ ಖರ್ಚನ್ನು 3,00,000/- ನೀಡಿ ಪ್ರಾಯೋಜಿಸಬಹುದು. ಅಥವಾ 1,50,000/- ನೀಡಿ ಒಂದು ವರ್ಷ ಪ್ರಾಯೋಜಿಸಬಹುದು. ದಾನಿಗಳು ಬ್ರಹ್ಮಚಾರಿಗಳ ಈ ಖರ್ಚನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ 10,000/-, 25,000/-, 50,000/- ಹಾಗೂ 1,00,000/- ನೀಡಿಯೂ ಪ್ರೋತ್ಸಾಹಿಸಬಹುದು. ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿಯ ಜ್ಞಾನವನ್ನು ಪಾರಂಪರಿಕವಾಗಿ ನೀಡಲು ಹಾಗೂ ಭವ್ಯವಾದ ದೇಶವನ್ನು ನಿರ್ಮಿಸುವ ಈ ಮಹತ್ತರ ಕಾರ್ಯದಲ್ಲಿ ತಾವುಗಳು ಕೈಜೋಡಿಸಿ ಧನ್ಯರಾಗಬೇಕೆಂದು ಕೋರುತ್ತೇವೆ.

ಕನ್ನಡದಲ್ಲಿ ನಡೆಯುತ್ತಿರುವ ಈ ವೇದಾಂತ ತರಬೇತಿಯಲ್ಲಿ ಪೂಜ್ಯ ಸ್ವಾಮೀ ಸ್ವರೂಪಾನಂದರು **ಅಕ್ಟೋಬರ್ 13ರಂದು ಬೆಂಗಳೂರಿನ ಜೆ.ಪಿ.ನಗರದ ಶ್ರೀಪಾದಕ್ಷೇತ್ರದಲ್ಲಿ** ಉದ್ಘಾಟಿಲಿದ್ದಾರೆ. ಈ ಕರ್ನಾಟಕ ಸಾಂದೀಪನಿಯ ಉದ್ಘಾಟನಾ ಸಮಾರಂಭಕ್ಕೆ ನಿಮಗೆ ಆತ್ಮೀಯ ಸ್ವಾಗತ.

ಋಷಿಪುತ್ರ ಯೋಜನೆಗೆ ದಾನನೀಡಬಯಸುವವರು ನಮ್ಮ ವೆಬ್ಸೈಟ್ **https://chinmayabangalore.org** ನಲ್ಲಿ ನೀಡಬಹುದು ಅಥವಾ

**Karnataka Chinmaya Seva Trust**
**Karnataka Bank**
**Indiranagar**
**SB a/c. 1092500100207101**
**IFSC code. KARB0000109**